ಬರುತ್ತದೆ. 'ಮಾವಾ, ಕರ್ಣಂಗೆ ಸಾರಥಿಯಾಗಿ' ಎಂದು ಕೌರವ ಬೇಡಿಕೊಂಡಾಗ ಸಿಟ್ಟಿನಿಂದ ಬೆವತು ಹೋದ ಶಲ್ಯನು 'ನೀವು ಅರಸರು ಕಲಿಯನ್ನು ಹೇಡಿಯನ್ನಾಗಿ ಮಾಡಬಲ್ಲಿರಿ, ಹೇಡಿಯನ್ನು ಕಲಿಯನ್ನಾಗಿ ಮಾಡಬಲ್ಲಿರಿ' ಎಂದು ಛೇಡಿಸುತ್ತಾನೆ.

ಹೀಗೆ ಪ್ರತಿಹಂತದಲ್ಲೂ ಕುಲದ ಪ್ರಶ್ನೆಯೇ ಇದಿರಾದಾಗ ಅದನ್ನು ನಿವಾರಿಸಿಕೊಳ್ಳಲೇಬೇಕಾದ ಒತ್ತಡಕ್ಕೆ ಕರ್ಣ ಗುರಿಯಾಗುತ್ತಾನೆ. ಇಂಥ ಪರಿಸ್ಥಿತಿಗಳ ಬಗ್ಗೆ ಪಂಪನಿಗೆ ಆಳವಾದ ತಿಳಿವಳಿಕೆಯಿತ್ತು. ಹಾಗಾಗಿಯೇ ಆತ ತನ್ನ ಕಾವ್ಯದ ನಾಯಕ ಅರ್ಜುನನೇ ಹೌದಾದರೂ, ಅದನ್ನು ಮರೆತು 'ನೆನೆಯದಿರಣ್ಣ ಭಾರತದೊಳಿಂ ಪೆರರಾರುಮನೊಂದೆ ಚಿತ್ತದಿಂ ನೆನೆವೊಡೆ ಕರ್ಣನಂ ನೆನೆಯ' ಎಂದು ಕರ್ಣನ ಗುಣಗಾನ ಮಾಡುತ್ತಾನೆ. ದೊಡ್ಡ ಕವಿಗಳಿಗೆ ಮಾತ್ರ ಸಾಧ್ಯವಾಗುವ ಸಂಗತಿಯಿದು. ಅವರು ಬರೆಯುವ ಹೊತ್ತಲ್ಲಿ ಎಲ್ಲ ಹಂಗುಗಳಿಂದ ಪಾರಾಗುತ್ತಾರೆ.

ಪಂಪನ ಕೌರವನು ಕರ್ಣನನ್ನು ಯಾವುದೇ ಸಂದರ್ಭದಲ್ಲಿ ಬಿಟ್ಟುಕೊಡುವುದಿಲ್ಲ. ಪಂಪ ಭಾರತದ ಸುಪ್ರಸಿದ್ಧ ಪದ್ಯಗಳಲ್ಲೊಂದಾದ 'ನೆತ್ತಮನಾಡಿ ಭಾನುಮತಿ ಸೋಲ್ತೊಡೆ'ಯು ಇವರಿಬ್ಬರ ಸ್ನೇಹದ ಜೊತೆಗೆ ಭಾನುಮತಿಯನ್ನೂ ಒಳಗೊಳ್ಳುತ್ತದೆ. ಕೃಷ್ಣನು ಕರ್ಣನನ್ನು ಪಾಂಡವರ ಕಡೆಗೆ ಕರೆಯುವ ಹೊತ್ತಲ್ಲಿ ಕರ್ಣ ಈ ಘಟನೆಯನ್ನು ನೆನಪಿಸಿಕೊಳ್ಳುತ್ತಾನೆ. ಅದರ ಪ್ರಕಾರ, ಒಂದು ದಿವಸ ಕರ್ಣ ಮತ್ತು ಭಾನುಮತಿ ಇಬ್ಬರೇ ಪಗಡೆಯಾಡುತ್ತಾರೆ. ಆಟದಲ್ಲಿ ಭಾನುಮತಿ ಸೋಲುತ್ತಾಳೆ. ಆಗ ಪಂಥಕ್ಕಿಟ್ಟ ವಸ್ತುವನ್ನು ಕೊಡು ಎಂದು ಕರ್ಣನು ಅವಳನ್ನು ಕಾಡುತ್ತಾನೆ. ಆದರೆ, ಯಾಕೋ ಭಾನುಮತಿ ಹಿಂಜರಿಯುತ್ತಾಳೆ. ಹಟ ಬಿಡದ ಕರ್ಣನು ಬಹುಶಃ ಆಕೆಯ ಸೊಂಟದ ಲಂಬಣಕ್ಕೆ (ಡಾಬುವಿಗೆ) ಕೈ ಹಾಕಿ ಎಳೆಯುತ್ತಾನೆ. ಲಂಬಣ ಹರಿದು ಮುತ್ತೆಲ್ಲಾ ನೆಲದಲ್ಲಿ ಹರಡುತ್ತದೆ. ಯಾವುದೋ ಉತ್ಸಾಹದಲ್ಲಿ ನಡೆದುಹೋದ ಘಟನೆಯಿಂದ ಇಬ್ಬರೂ ಸಂಕೋಚಕ್ಕೊಳಗಾಗಿ ಕಸಿವಿಸಿಗೊಳಗಾಗುತ್ತಿರುವಾಗ ಅಲ್ಲಿಗೆ ಬಂದ ದುರ್ಯೋಧನನು 'ಸಂಕೋಚವಿಲ್ಲದೆ ಮುತ್ತುಗಳನ್ನು ಆಯ್ದುಕೊಳ್ಳಿ' ಎಂದು ಹೇಳಿ ಇಬ್ಬರನ್ನೂ ನಿರಾಳಗೊಳಿಸುತ್ತಾನೆ. ಕರ್ಣ ಭಾನುಮತಿಯರ ನಡುವಣ ಈ ಬಗೆಯ ಆಪ್ತ ಸಂಬಂಧವು ವ್ಯಾಸ ಭಾರತದಲ್ಲಿ ಇಲ್ಲ. ತಮಿಳು ಭಾರತದಲ್ಲಿ ಇದೆಯಾದರೂ ಅದು ಪಂಪೋತ್ತರ ಯುಗಕ್ಕೆ ಸೇರಿದ್ದು. ಪಂಪ ಈ ಘಟನೆಯನ್ನು ಜನಪದ ಭಾರತಗಳಲ್ಲಿ ಕೇಳಿಸಿಕೊಂಡನೋ, ಅಥವಾ ಇದು ಅವನದೇ ಸೃಷ್ಟಿಯೋ ಎಂಬುದೂ ತಿಳಿದಿಲ್ಲ. ಕನ್ನಡ ವಿಮರ್ಶಕರು ಮಾತ್ರ ಈ ಘಟನೆಯ ಬಗ್ಗೆ ಬಹಳ ಚರ್ಚೆ ನಡೆಸಿದ್ದಾರೆ.

10ನೇ ಶತಮಾನದ ವೀರಯುಗದ ಮೌಲ್ಯಗಳಿಗೆ ಅನುಗುಣವಾಗಿ ಬದುಕಿದ, ಹೋರಾಡಿದ ದುರ್ಯೋಧನನ್ನು 'ಏನಭಿಮಾನಧನಂ ಸುಯೋಧನಂ' ಎಂದು ಪಂಪ ಕೊಂಡಾಡುತ್ತಾನೆ.

ಹೀಗೆ ವ್ಯಾಸನ ಮಹಾಭಾರತವು ಕನ್ನಡ ಭಾರತವಾಗಿ, ವಿಕ್ರಮಾರ್ಜುನ ವಿಜಯವಾಗಿ ಹೊಸ ರೂಪ ಧರಿಸಿ ಬದುಕುಳಿಯಿತು. ಹೊಸ ಕಥನಗಳು ಸಿದ್ಧಗೊಳ್ಳುವುದೇ ಹೀಗೆ. ಗಮನಿಸಬೇಕಾದ ಮುಖ್ಯ ವಿಷಯವೆಂದರೆ, ಪಂಪನ ವಿಕ್ರಮಾರ್ಜುನ ವಿಜಯವು 10ನೇ ಶತಮಾನದಲ್ಲಿಯೇ ಸ್ಥಗಿತಗೊಂಡಿಲ್ಲ. ವಿಕ್ರಮಾರ್ಜುನ ವಿಜಯದ 13ನೇ ಆಶ್ವಾಸದಿಂದ ಪ್ರೇರಣೆ ಪಡೆದ ಕವಿಚಕ್ರವರ್ತಿ ರನ್ನನು ಅದನ್ನೇ ಒಂದು ಸ್ವತಂತ್ರ ಕಾವ್ಯವನ್ನಾಗಿ ಪರಿವರ್ತಿಸಿ 'ಸಾಹಸ ಭೀಮ ವಿಜಯಂ' ಬರೆದ. ಮುಂದೆ ಕುಮಾರವ್ಯಾಸನೂ 'ಕರ್ಣಾಟ ಭಾರತ ಕಥಾಮಂಜರಿ'ಯನ್ನು ಬರೆದ. ಅದು ಗಮಕಿಗಳ ಮೂಲಕ ಹಾಡುವ ಕಾವ್ಯವಾಗಿ, ಹರಿಕಥೆಗಳ ಮೂಲಕ ಪ್ರದರ್ಶನ ಪಠ್ಯಗಳಾಗಿ, ಯಕ್ಷಗಾನದ ಮೂಲಕ ಕುಣಿಯುವ ಪಠ್ಯಗಳಾಗಿ ಜನರ ಕಡೆಗೆ ನಡೆಯುತ್ತಲೇ ಇದ್ದುವು. ಹೀಗೆ ನೋಡುವಾಗ ಪಂಪನು ನಮ್ಮ ಸುತ್ತ ಈಗಲೂ ಇದ್ದಾನೆ ಎಂಬ ಭಾವ ಮೂಡುತ್ತದೆ. ಪಂಪನ 'ನೆಲಕ್ಕಿರಿವೆನೆಂದು ಬಗೆದರೆ ಛಲಕ್ಕಿರಿವೆಂ' ಎಂಬ ಮಾತನ್ನು ಗಮಕಿಗಳು, ಹರಿದಾಸರು, ಯಕ್ಷಗಾನ ಕಲಾವಿದರು, ಅಧ್ಯಾಪಕರು ಈಗಲೂ ಹೇಳುತ್ತಿದ್ದಾರೆಂದರೆ ಪಂಪ ನಮ್ಮ ಸುತ್ತ ಮುತ್ತ ಇದ್ದಾನೆಂದೇ ಅರ್ಥ ತಾನೇ?

ಒಟ್ಟಿನಿಂದ ಯಾವ ದೃಷ್ಟಿಕೋನದಿಂದ ನೋಡಿದರೂ ಪಂಪನು ದೊಡ್ಡಕವಿಯೇ. ಅದರಿಂದಲೇ ಅತ ನಾಡೋಜ. ●